# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಸದಸ್ಯರ ಹೆಸರು | : | ಶ್ರೀಮತಿ ಡಾ: ಉಮಾಶ್ರೀ<br>(ನಾಮ ನಿರ್ದೇಶನ ಹೊಂದಿದವರು) |
| 2 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1370 |
| 3 | ಉತ್ತರಿಸಬೇಕಾದ ದಿನಾಂಕ | : | 22-08-2025 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿಯಡಿ ಕೆಲಸ ಮಾಡುತ್ತಿರುವ ಕೂಲಿ ಕಾರ್ಮಿಕರ ಸಂಖ್ಯೆ ಎಷ್ಟು: ಪ್ರತಿ ಕೂಲಿ ಕಾರ್ಮಿಕರಿಗೆ ನೀಡುವ ಕೂಲಿ ಮೊತ್ತವೆಷ್ಟು; ಇವರಿಗೆ ವೇತನ ಕಾಲಕಾಲಕ್ಕೆ ಪಾವತಿಸಲಾಗಿದೆಯೇ; ಇಲ್ಲವಾದರೆ ಎಷ್ಟು ತಿಂಗಳ ವೇತನ ಬಾಕಿ ಇದೆ; | ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಒಟ್ಟು 41.43 ಲಕ್ಷ ಕುಟುಂಬಗಳಿಗೆ ಸೇರಿದ 75.42 ಲಕ್ಷ ಜನರು ಸಕ್ರಿಯರಾಗಿರುತ್ತಾರೆ.<br><br>2025-26 ನೇ ಸಾಲಿನಲ್ಲಿ ಏಪ್ರಿಲ್-2025 ರಿಂದ ಜುಲೈ-2025 ಮಾಹೆಯ ಅಂತ್ಯದವರೆಗೆ 32.55 ಲಕ್ಷ ಜನರು ಯೋಜನೆಯಡಿ ಕೆಲಸ ನಿರ್ವಹಿಸಿರುತ್ತಾರೆ.<br>ನರೇಗಾ ಯೋಜನೆಯಡಿ 2025-26 ನೇ ಸಾಲಿಗೆ ಕರ್ನಾಟಕ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಅಧಿಸೂಚಿತ ಕೂಲಿ ದರ ದಿನಕ್ಕೆ 370/- ರೂಗಳು.<br>ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಅಕುಶಲ ಕೆಲಸ ಬೇಡಿಕೆ ಆಧಾರಿತ ಯೋಜನೆಯಾಗಿದ್ದು, ಕೇಂದ್ರ ಸರ್ಕಾರವು ಕೂಲಿ ಮೊತ್ತದ ಅನುದಾನವನ್ನು ಮಾನವ ದಿನಗಳ ಸೃಜನೆಯನ್ನು ಆಧರಿಸಿ ಕಾಲಕಾಲಕ್ಕೆ ನೇರವಾಗಿ ಫಲಾನುಭವಿಗಳಿಗೆ DBT ಮೂಲಕ ಜಮೆ ಮಾಡಲಾಗುತ್ತದೆ. ದಿನಾಂಕ: 18.08.2025 ರಂತೆ, ರೂ.238.52 ಕೋಟಿ ಕೂಲಿ ಮೊತ್ತವು ಯೋಜನೆಯಡಿ ಕೆಲಸ ನಿರ್ವಹಿಸಿದ ಜನರ ಖಾತೆಗಳಿಗೆ ಜಮೆಯಾಗಲು ಬಾಕಿ ಇರುತ್ತದೆ. |
| ಆ) | ಈ ಯೋಜನೆಯಡಿ ಹೊರಗುತ್ತಿಗೆ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆಯೇ; ರಾಜ್ಯದಲ್ಲಿ ಎಷ್ಟು ಜನ ಕಾರ್ಯನಿರ್ವಹಿಸುತ್ತಿದ್ದಾರೆ; ಪ್ರತಿ ವರ್ಷ ಇವರಿಗೆ ನೀಡುವ ವೇತನದ ಒಟ್ಟು ಮೊತ್ತವೆಷ್ಟು; | ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಹೊರಗುತ್ತಿಗೆ ಆಧಾರದಲ್ಲಿ 3190 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. (ಹುದ್ದೆವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ)<br><br>2024-25 ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ವೇತನಕ್ಕಾಗಿ ವಾರ್ಷಿಕವಾಗಿ ಸರ್ಕಾರದಿಂದ ಅಂದಾಜು ರೂ. 161.02 ಕೋಟಿ ವೆಚ್ಚವಾಗಿದೆ. |
| ಇ) | ಕೂಲಿ ಕಾರ್ಮಿಕರು ಹಾಗೂ ಹೊರಗುತ್ತಿಗೆ ನೌಕರರಿಗೆ ವೇತನಕ್ಕಾಗಿ ವಾರ್ಷಿಕ ಎಷ್ಟು ಮೊತ್ತ ಸರ್ಕಾರದಿಂದ ವ್ಯಯವಾಗುತ್ತಿದೆ; | 2024-25 ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೂಲಿ ಕಾರ್ಮಿಕರ ಕೂಲಿ ಮೊತ್ತ ವಾರ್ಷಿಕವಾಗಿ ರೂ. 4214.50 ಕೋಟಿ ಸರ್ಕಾರದಿಂದ ವೆಚ್ಚವಾಗಿರುತ್ತದೆ ಹಾಗೂ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ವೇತನಕ್ಕಾಗಿ ವಾರ್ಷಿಕವಾಗಿ ಸರ್ಕಾರದಿಂದ ಅಂದಾಜು ರೂ. 161.02 ಕೋಟಿ ವೆಚ್ಚವಾಗುತ್ತಿದೆ. |

<table>
<tr>
<td>ಈ)</td>
<td>ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಗೆ ಕೇಂದ್ರ ಸರ್ಕಾರ ನೀಡುವ ಅನುದಾನವೆಷ್ಟು; 2024-25 ರಿಂದ 2025-26ರ ಅವಧಿಯ ಕೇಂದ್ರ ಸರ್ಕಾರದ ಅನುದಾನವನ್ನು ರಾಜ್ಯ ಸರ್ಕಾರಕ್ಕೆ ನೀಡಲಾಗಿದೆಯೇ; ಪ್ರತಿ ಕೂಲಿ ಕಾರ್ಮಿಕರಿಗೆ ವೇತನ ಪಾವತಿಯ ವಿಧಾನವೇನು?</td>
<td>2024-25 ಮತ್ತು 2025-26 ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಅನುದಾನ ವಿವರ ಈ ಕೆಳಗಿನಂತಿದೆ.<br>
(ರೂ. ಕೋಟಿಗಳಲ್ಲಿ)
<table>
<tr><th rowspan="2">ಆರ್ಥಿಕ ವರ್ಷ</th><th colspan="3">ಕೇಂದ್ರ ಸರಕಾರದಿಂದ ಬಿಡುಗಡೆಯಾದ ಅನುದಾನ</th><th rowspan="2">ಒಟ್ಟು ಬಿಡುಗಡೆಯಾದ ಅನುದಾನ</th></tr>
<tr><th>ಕೂಲಿ</th><th>ಸಾಮಾಗ್ರಿ</th><th>ಆಡಳಿತಾತ್ಮಕ</th></tr>
<tr><td>2024-25</td><td>4214.50</td><td>1299.81</td><td>200.40</td><td>5714.71</td></tr>
<tr><td>2025-26</td><td>2060.25</td><td>323.57</td><td>114.23</td><td>2498.05</td></tr>
</table>
1. Bank Statement ರಂತೆ ಮಾಹಿತಿ ನೀಡಲಾಗಿದೆ.<br>
2. 2025-26 ನೇ ಸಾಲಿನ ಮಾಹಿತಿಯು ದಿನಾಂಕ: 13.08.2025 ರ ಅಂತ್ಯದವರೆಗೆ ನೀಡಲಾಗಿದೆ.<br><br>
<u>ಕೂಲಿ ಮೊತ್ತ ಪಾವತಿ ವಿಧಾನ :</u><br>
1. NMR ಮುಕ್ತಾಯ ದಿನಾಂಕದಿಂದ 03 ದಿನಗಳೊಳಗಾಗಿ Technical assistant ಗಳು ಕೆಲಸದ ಪ್ರಮಾಣದ ಅಳತೆ ಪಡೆದು, MB ದಾಖಲಿಸಿ, ಅದರಂತೆ ನರೇಗಾ ತಂತ್ರಾಂಶದ e-MB module ನಲ್ಲಿ ದಾಖಲಿಸುತ್ತಾರೆ. ಇದನ್ನು ತಾಂತ್ರಿಕ ಸಂಯೋಜಕರು ಪರಿಶೀಲಿಸಿ, check measurement ವ್ಯವಸ್ಥೆಯು ತಂತ್ರಾಂಶದಲ್ಲಿದೆ.<br>
2. e-MB ಅನುಮೋದಿಸಿದ ನಂತರ, wage list ಸೃಜಿಸಲಾಗುವುದು.<br>
3. ಸದರಿ wage list ಗಳಿಗೆ FTO ಗಳನ್ನು ಸೃಜಿಸಿ ಮೊದಲನೇ ಮತ್ತು ಎರಡನೇ Signatory ಅಧಿಕಾರಿಗಳು FTO ಗಳಿಗೆ Digital ಸಹಿ ಮಾಡುತ್ತಾರೆ.<br>
4. ಸದರಿ FTO ಗಳು PFMS ತಂತ್ರಾಂಶಕ್ಕೆ ವರ್ಗಾವಣೆಯಾಗುತ್ತದೆ. ಕೇಂದ್ರ ಸರ್ಕಾರದಿಂದ ಈ FTO ಗಳಿಗೆ ಅನುಮೋದನೆ ದೊರೆದ ನಂತರ, NPCI ಮುಖಾಂತರ ಕೂಲಿಕಾರರ ಖಾತೆಗಳಿಗೆ ನೇರವಾಗಿ ಜಮೆ ಆಗುತ್ತದೆ.</td>
</tr>
</table>

**ಸಂಖ್ಯೆ: ಗ್ರಾಅಪ/647/ಉಖಾಯೋ/2025**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ
ತಂತ್ರಜ್ಞಾನ ಸಚಿವರು

# ಅನುಬಂಧ-1

ರಾಜ್ಯದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಮಾಹಿತಿ

| ಕ್ರ ಸಂ | ಹುದ್ದೆ | ಸಿಬ್ಬಂದಿ ಸಂ. |
|---|---|---|
| **ಕೇಂದ್ರ ಕಛೇರಿ** | | |
| 1 | ಸಮಾಲೋಚಕರು (ನಿವೃತ್ತ) | 4 |
| 2 | ಸಂಯೋಜಕರು | 26 |
| 3 | ಆಡಳಿತ ಸಹಾಯಕರು | 17 |
| 4 | ಸಹಾಯವಾಣಿ ಸಿಬ್ಬಂದಿಗಳು | 13 |
| 5 | DEO | 4 |
| 6 | D-Group (ಇತರೆ ಕಛೇರಿಗಳ ನಿಯೋಜನೆ ಒಳಗೊಂಡಂತೆ) | 27 |
| 7 | ವಾಹನ ಚಾಲಕರು | 8 |
| **ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಹಂತ** | | |
| 1 | ಸಹಾಯಕ ಜಿಲ್ಲಾ ಕಾರ್ಯಕ್ರಮ ಸಂಯೋಜಕರು | 28 |
| 2 | ಜಿಲ್ಲಾ MIS ಸಂಯೋಜಕರು | 30 |
| 3 | ಜಿಲ್ಲಾ IEC ಸಂಯೋಜಕರು | 28 |
| 4 | ಜಿಲ್ಲಾ ಲೆಕ್ಕ ವ್ಯವಸ್ಥಾಪಕರು | 27 |
| 5 | ತಾಂತ್ರಿಕ ಸಂಯೋಜಕರು | 262 |
| 6 | ತಾಲ್ಲೂಕು MIS ಸಂಯೋಜಕರು | 220 |
| 7 | ತಾಲ್ಲೂಕು IEC ಸಂಯೋಜಕರು | 198 |
| 8 | ಆಡಳಿತ ಸಹಾಯಕರು | 165 |
| 9 | ತಾಂತ್ರಿಕ ಸಹಾಯಕರು | 1800 |
| 10 | ಗ್ರಾಮ ಕೂಲಿ ಸಹಾಯಕರು | 46 |
| 11 | DEO | 287 |
| **ಒಟ್ಟು** | | **3190** |

## ಪೂರಕ ಟಿಪ್ಪಣಿ: ನರೇಗಾ ಯೋಜನೆ

- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ರಾಜ್ಯದಲ್ಲಿ 2006 ರಿಂದ ಚಾಲ್ತಿಯಲ್ಲಿದ್ದು, ಯೋಜನೆಯಡಿ ಗ್ರಾಮೀಣ ಪ್ರದೇಶದ ಪ್ರತಿ ನೊಂದಾಯಿತ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಅಕುಶಲ ಕೆಲಸ ಒದಗಿಸಲಾಗುತ್ತದೆ.
- ಗ್ರಾಮೀಣ ಕೂಲಿಕಾರರಿಗೆ ಅಕುಶಲ ಕೆಲಸ ಒದಗಿಸುವುದರ ಜೊತೆಗೆ ಗ್ರಾಮೀಣ ಪ್ರದೇಶಗಳ ಮೂಲ ಸೌಕರ್ಯ ಅಭಿವೃದ್ಧಿಗೆ ನೆರವಾಗುವಂತಹ ಮತ್ತು ಬಾಳಿಕೆ ಬರುವಂತಹ ಸಮುದಾಯ ಆಸ್ತಿಗಳನ್ನು ಸೃಜನೆ ಮಾಡಲಾಗುತ್ತದೆ. ಕೇಂದ್ರ ಸರ್ಕಾರವು ನಿಗದಿಪಡಿಸಿರುವ 266 ಅನುಮತಿಸಲ್ಪಟ್ಟ ಕಾಮಗಾರಿಗಳ ಪಟ್ಟಿಯಲ್ಲಿರುವಂತೆ ನರೇಗಾ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

- ನರೇಗಾ ಯೋಜನೆಯಡಿ 2025-26 ನೇ ಸಾಲಿಗೆ, ಕರ್ನಾಟಕ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಅದಿಸೂಚಿತ ಕೂಲಿ ದರ ದಿನಕ್ಕೆ 370/- ರೂಗಳು ನಿಗದಿಯಾಗಿದೆ. ಸಾಮಗ್ರಿ ಮತ್ತು ಆಡಳಿತಾತ್ಮಕ ವೆಚ್ಚ ಸೇರಿಸಿಕೊಂಡು ಒಂದು ಮಾನವ ದಿನಕ್ಕೆ 650/- ರೂಗಳು ನಿಗದಿಯಾಗಿದೆ.

- ರಾಜ್ಯದಲ್ಲಿ ನರೇಗಾ ಯೋಜನೆಯಡಿ ಒಟ್ಟು 81.87 ಲಕ್ಷ ಕುಟುಂಬಗಳು ನೊಂದಣಿಯಾಗಿದ್ದು, ಇದರಲ್ಲಿ 41.43 ಲಕ್ಷ ಕುಟುಂಬಗಳು ಸಕ್ರಿಯರಿರುತ್ತಾರೆ.
- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪ್ರತೀ ವರ್ಷ ರಾಜ್ಯದಲ್ಲಿ ಸರಾಸರಿ 53.00 ಲಕ್ಷ ಜನರು ಕೆಲಸ ನಿರ್ವಹಿಸುತ್ತಿದ್ದಾರೆ. 2025-26 ನೇ ಸಾಲಿನಲ್ಲಿ ಏಪ್ರಿಲ್-2025 ರಿಂದ ಜುಲೈ-2025 ಮಾಹೆಯ ಅಂತ್ಯದವರೆಗೆ ಒಟ್ಟು 32.55 ಲಕ್ಷ ಜನರು ಯೋಜನೆಯಡಿ ಕೆಲಸ ನಿರ್ವಹಿಸಿರುತ್ತಾರೆ.
- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಅಕುಶಲ ಕೆಲಸ ಬೇಡಿಕೆ ಆಧಾರಿತ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದಿಂದ ಕೂಲಿ ಮೊತ್ತದ ಅನುದಾನವನ್ನು ಮಾನವ ದಿನಗಳ ಸೃಜನೆಯನ್ನು ಆಧರಿಸಿ ಕಾಲಕಾಲಕ್ಕೆ ನೇರವಾಗಿ ಫಲಾನುಭವಿಗಳಿಗೆ DBT ಮೂಲಕ ಜಮೆ ಮಾಡುಲಾಗುತ್ತದೆ. ದಿನಾಂಕ: 18.08.2025 ರಂತೆ, ರೂ.238.52 ಕೋಟಿ ಕೂಲಿ ಮೊತ್ತವು ಯೋಜನೆಯಡಿ ಕೆಲಸ ನಿರ್ವಹಿಸಿದ ಜನರ ಖಾತೆಗಳಿಗೆ ಜಮೆಯಾಗಲು ಬಾಕಿ ಇರುತ್ತದೆ.

<u>ಕಳೆದ **02** ವರ್ಷಗಳಲ್ಲಿ ನರೇಗಾ ಯೋಜನೆಯಡಿ ರಾಜ್ಯದ ಸಾಧನೆಗಳು :</u>

- 2023-24 ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ 54.02 ಲಕ್ಷ ಜನರು ಕೆಲಸ ನಿರ್ವಹಿಸಿದ್ದು, ಕೇಂದ್ರ ಸರ್ಕಾರವು ನಿಗದಿಪಡಿಸಿದ ಪರಿಷ್ಕೃತ ಗುರಿ 14.00 ಕೋಟಿ ಮಾನವ ದಿನಗಳಿಗೆ ಎದುರಾಗಿ 13.85 ಕೋಟಿ ಮಾನವ ದಿನಗಳನ್ನು ಸೃಜಿಸಿದ್ದು, ಶೇ.

106.54 ರಷ್ಟು ಸಾಧನೆ ಆಗಿದೆ. ಒಟ್ಟು ರೂ.3839.22 ಕೋಟಿ ಕೂಲಿ ಮೊತ್ತವನ್ನು ಕೂಲಿಕಾರರ ಖಾತೆಗಳಿಗೆ ನೇರವಾಗಿ ಜಮೆ ಮಾಡಲಾಗಿದೆ. ಒಟ್ಟಾರೆಯಾಗಿ ಯೋಜನೆಯಡಿ ರೂ.6298.54 ಕೋಟಿ ಮೊತ್ತವು ವೆಚ್ಚವಾಗಿರುತ್ತದೆ.

2023-24 ನೇ ಸಾಲಿನಲ್ಲಿ 18.99 ಲಕ್ಷ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, 9.19 ಲಕ್ಷ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಚಾಲ್ತಿಯಲ್ಲಿರುವ 9.79 ಲಕ್ಷ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುತ್ತಿದೆ.

- 2024-25 ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ 51.83 ಲಕ್ಷ ಜನರು ಕೆಲಸ ನಿರ್ವಹಿಸಿದ್ದು, ಕೇಂದ್ರ ಸರ್ಕಾರದಿಂದ ನಿಗದಿಯಾದ 13.00 ಕೋಟಿ ಮಾನವ ದಿನಗಳ ಗುರಿಗೆ ಎದುರಾಗಿ 13.14 ಕೋಟಿ ಮಾನವ ದಿನಗಳನ್ನು ಸೃಜಿಸಿದ್ದು, ಶೇ.101.1 ರಷ್ಟು ಸಾಧನೆ ಆಗಿದೆ. ಒಟ್ಟು ರೂ.4214.5 ಕೋಟಿ ಕೂಲಿ ಮೊತ್ತವನ್ನು ಕೂಲಿಕಾರರ ಖಾತೆಗಳಿಗೆ ನೇರವಾಗಿ ಜಮೆ ಮಾಡಲಾಗಿದೆ. ಒಟ್ಟಾರೆಯಾಗಿ ಯೋಜನೆಯಡಿ ರೂ.6350.31 ಕೋಟಿ ಮೊತ್ತವು ವೆಚ್ಚವಾಗಿರುತ್ತದೆ.

  2024-25 ನೇ ಸಾಲಿನಲ್ಲಿ 16.36 ಲಕ್ಷ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, 9.70 ಲಕ್ಷ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಚಾಲ್ತಿಯಲ್ಲಿರುವ 6.65 ಲಕ್ಷ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುತ್ತಿದೆ..

# Karnataka Legislative Council

1. Name of the Member : Dr.Umashri (Nominated Member)
2. Star question no : 1370
3. Date to be replied : 22.08.2025

| SL No | Question | Reply |
|---|---|---|
| A | How many laborers are working under the Mahatma Gandhi National Rural Employment Guarantee Scheme in the state; what is the wage amount given to each laborer; are they being paid wages on time; if not, how many months of wages are pending? | On average, 53.00 lakh rural people are working under the MGNREGS.<br><br>During the FY 2025-26, from April 2025 to the end of July 2025, 32.55lakh people have worked under the scheme.<br><br>For the FY 2025-26, the wage rate notified by the Central Government under the NREGA scheme for Karnataka State is ₹370/- per day<br><br>The Mahatma Gandhi National Rural Employment Guarantee Scheme is a demand-driven unskilled labor scheme, and the Central Government releases the wage amount based on the generation of person-days and transfers it directly to the beneficiaries through DBT from time to time. As on 13.08.2025, an amount of ₹203.69 crore of wages remains pending for credit to the accounts of workers engaged under the scheme. |
| Aa | "Are outsourced employees working under this scheme; how many of them are working in the state; what is the total amount of salary paid to them every year | 3205 outsource staff are working under under Mahatma Gandhi NREGA Scheme.<br>(information is attached in **Annexure-1**)<br>During the year 2024-25, the Government has incurred an estimated annual expenditure of ₹161.02 crore towards the salaries of outsourced employees working under the Mahatma Gandhi National Rural Employment Guarantee Scheme. |
| E | What is the total annual amount spent by the Government on wages for laborers and salaries for outsourced employees? | During the FY 2024-25, the Government has incurred an annual expenditure of ₹4214.50 crore towards the wages of laborers under the MGNREGS, and an estimated annual expenditure of ₹161.02 crore towards the salaries of outsourced employees working under the scheme. |
| Ee | What is the amount of grant provided by the Central Government for the Mahatma Gandhi National Rural Employment Guarantee Scheme; has the Central Government released the grant to the State Government for the period 2024-25 to 2025-26; what is the method of wage payment to each laborer? | The details of the grant released by the Central Government for the MGNREGS during the financial years 2024-25 and 2025-26 are as follows<br><br>(Rs in crore) |

| Financial Year | Amount released by the Central Government | | | Total released amount |
|---|---|---|---|---|
| | Wage | Material | Admin | |
| 2024-25 | 4214.50 | 1299.81 | 200.40 | 5714.71 |
| 2025-26 | 2060.25 | 323.57 | 114.23 | 2498.05 |

| | | |
|---|---|---|
| | | 1. Information has been provided as per Bank Statement.<br>2. The data for the financial year 2025-26 has been given up to 13.08.2025<br>**Method of Wage Payment:**<br>1. Within 3 days from the closure date of the NMR, Technical Assistants measure the quantity of work completed, record it in the MB, and enter it in the NREGA software through the e-MB module. This is then verified by the Technical Coordinators, with a check measurement system available in the software.<br>2. After approval of the e-MB, the wage list is generated.<br>3. FTOs (Fund Transfer Orders) are created for the wage lists, and the first and second Signatory Authorities digitally sign the FTOs.<br>4. The FTOs are then transferred to the PFMS software. After approval from the Central Government, the wages are directly credited to the workers' bank accounts through NPCI. |

**No: RDP/647/EGS/2025**

(Priyank Kharge)

Minister for Rural Development and Panchayat Raj

Information Technology and Biotechnology

**Note**

**Legislative Council Question No: 1370**

**Regarding laborers working under the Mahatma Gandhi NREGA scheme**

- The Mahatma Gandhi National Rural Employment Guarantee Scheme has been notified in the State since 2006, under which 100 days of unskilled work is provided in a financial year to each registered rural household.
- Along with providing unskilled work to rural laborers, durable community assets that support rural infrastructure development are being created. Under the MGNREGA scheme, works are implemented as per the list of 266 permissible works prescribed by the GoI.
- Under the MGNREGA scheme for the year 2025-26, the Government of India has fixed the notified wage rate for Karnataka at ₹370 per day.
- Under the Mahatma Gandhi National Rural Employment Guarantee Scheme, an average of 53.00 lakh people are employed every year in the State. During the FY2025-26, from April 2025 to the end of July 2025, a total of 32.55 lakh people have been employed under the scheme.
- The Mahatma Gandhi National Rural Employment Guarantee Scheme is a demand-driven programme for unskilled work. Under this scheme, the wage component is funded by the Central Government and directly transferred to the beneficiaries' accounts through DBT, based on the person-days generated. As on 18.08.2025, an amount of ₹238.52 crore towards wages remains pending for credit to the accounts of workers employed under the scheme.

**<u>The achievements of the state under the NREGA scheme in the last 2 years</u>**

- In the FY 2023-24, under the Mahatma Gandhi NREGA scheme, 54.02 lakh people were employed. Against the target of 13.00 crore person-days set by the Central Government, 13.85 crore person-days were generated, achieving 106.54%. A total of ₹3839.22 crore wages were directly transferred to the workers accounts. Overall, an expenditure of ₹6298.54 crore was incurred under the scheme.

- In the financial year 2023-24, a total of 18.99 lakh works were taken up, out of which 9.19 lakh works have been completed. Steps are being taken to complete the remaining 9.79 lakh ongoing works.
- In the financial year 2024-25, under the Mahatma Gandhi NREGA scheme, 51.83 lakh people were employed. Against the target of 13.00 crore person-days set by the Government of India, 13.14 crore person-days were generated, achieving 101.1 percent of the target. A total of ₹4214.5 crore in wages was directly credited to the workers' bank accounts, and overall an expenditure of ₹6350.31 crore has been incurred under the scheme.
- In the financial year 2024-25, a total of 16.36 lakh works were taken up, out of which 9.70 lakh works have been completed. Action is being taken to complete the remaining 6.65 lakh ongoing works.